Ex.5/2015
P.W.1

**ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 06-04-2018.**

ಪಾಟೀ ಸವಾಲು ಶ್ರೀ ಸಿ.ವಿ.ಪಿ. ವಕೀಲರಿಂದ ಃ

ಜಯಂತಿದೇವಿ ಶರ್ಮ ನನ್ನ ತಾಯಿ. ನನ್ನ ತಾಯಿಗೆ ನಾಲ್ಕು ಜನ ಮಕ್ಕಳು. ನನ್ನ ತಾಯಿ ಜೀವಂತ ಇದ್ದಾರೆ. ಮೇಲ್ಕಂಡ ಅಸಲು ದಾವಾ ಸಂಖ್ಯೆ 436/2000 ರಲ್ಲಿ ಏನು ಆದೇಶ ಆಗಿದೆ ಎಂದು ತಿಳಿದುಕೊಂಡಿದ್ದೇನೆ. 1 ಮತ್ತು 2 ನೇ ಪ್ರತಿವಾದಿಗಳಿಗೆ ಸ್ವಾಧೀನ ಕೊಡಿಸಬೇಕೆಂದು ಆದೇಶ ಆಗಿದೆ. 4 ನೇ ಪ್ರತಿವಾದಿ ರಾಜೇಗೌಡ ರವರ ವಿರುದ್ಧ ಯಾವುದೇ ಆದೇಶ ಆಗಿರಲಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ಪ್ರಸ್ತುತ ಮೆಡಿಕಲ್ ಶಾಪ್ ಇದೆ. ಸದರಿ ಮೆಡಿಕಲ್ ನ್ನು ಶಶಿಕಿರಣ್ ಎಂಬುವವರು ನಡೆಸುತ್ತಿದ್ದಾರೆ. ಶಶಿಕಿರಣ್ ಎಂಬುವವರು ಯಾವ ಆದಾರ ಇಲ್ಲದೆ ಸದರಿ ಮೆಡಿಕಲ್ ಶಾಪ್ ನ್ನು ನಡೆಸುತ್ತಿದ್ದಾರೆ. 4 ನೇ ಪ್ರತಿವಾದಿ ಯಾವ ಊರಿನವರು ಎಂದು ಈಗ ನೆನಪಿಲ್ಲ. ಸದರಿ 4 ನೇ ಪ್ರತಿವಾದಿ ತನ್ನಿಂದ ಮೆಡಿಕಲ್ ವ್ಯವಹಾರವನ್ನು ದಾವಾ ಸ್ವತ್ತಿನಲ್ಲಿ ನೋಡಿಕೊಳ್ಳಲು ಆಗದೆ ಇರುವ ಕಾರಣ ಜಿಪಿಎ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಸದರಿ ರಾಜೇಗೌಡ ರವರಿಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂದ ಇಲ್ಲ ಎಂದು ನುಡಿಯುತ್ತಾರೆ. ಸದರಿ ಅಂಗಡಿಯ ಮೆಡಿಕಲ್ ಶಾಪ್‌ನ ಲೈಸನ್ಸ್ ಸಂದೀಪ್ ರವರ ಹೆಸರಿನಲ್ಲಿದೆ.

ದಾವಾ ಸ್ವತ್ತು ಮೂಲತಃ ಪುರಸಬೆಗೆ ಸೇರಿದ ಆಸ್ತಿ ಎಂದರೆ ಸರಿ. ನನಗೆ ಸದರಿ ಅಂಗಡಿಯು ಅಂಚಿಕೆಯಾಗುವ ಕಾಲಕ್ಕೆ ಭಹಿರಂಗ ಹರಾಜು ಇರಲಿಲ್ಲ. ಪುರಸಬೆ ಮಳಿಗೆಗಳನ್ನು ಹರಾಜು ಮಾಡಬೇಕಾದರೆ ಭಹಿರಂಗ ಹರಾಜು ಮೂಲಕ ಮಾಡಬೇಕೆಂದು ನಿಯಮ ಇದೆ ಎಂದು ಸಾಕ್ಷಿಯ ಮೊದಲು ಇರಲಿಲ್ಲ ಎಂದು ನುಡಿಯತ್ತಾರೆ. ಸದರಿ ಅಂಗಡಿಯನ್ನು ನನಗೆ 5 ವರ್ಷಗಳ ಕಾಲ ಹಂಚಿಕೆ ಮಾಡಿದ್ದರು. ನನಗೆ 1992 ರಲ್ಲಿ ಕರಾರು ಆಗಿರುತ್ತದೆ. ಆದರೆ ಸ್ವಾಧೀನ ಪತ್ರ ನೀಡಿಲ್ಲ. ನನಗೆ ಮಳಿಗೆ ಸಂಖ್ಯೆ 16 ಕಾನೂನು ಬಾಹಿರವಾಗಿ ಹಂಚಿಕೆಯಾಗಿತ್ತು ಎಂದರೆ ಸರಿಯಲ್ಲ.

ಮಾನ್ಯ ಉಚ್ಚ ನ್ಯಾಯಾಲಯವು ಡಬ್ಲೂ.ಪಿ. ನಂ.58918/---, ರಿಂದ 58959/2015, 59187/---, ರಿಂದ 59252/2015, 59254/--- ರಿಂದ 59304/2015, 422/-- ರಿಂದ 425/2016, 807/--- ರಿಂದ 808/2016 ಪ್ರಕರಣಗಳಲ್ಲಿ ಪುರಸಬೆಯವರು ಪುರಸಬೆಯ ಆಸ್ತಿಗಳನ್ನು ಭಹಿರಂಗ ಹರಾಜಿನ ಮೂಲಕ ಹರಾಜು ಮಾಡಬೇಕೆಂದು ನಿರ್ಧೇಶನ ನೀಡಬೇಕೆಂದು ಎಂದರೆ ಸಾಕ್ಷಿಯು

Ex.5/2015
P.W.1

ಮೇಲ್ಕಂಡ ಅರ್ಜಿಗಳಲ್ಲಿಯ ಆದೇಶಗಳಿಗೂ ಈ ದಾವಾ ಸ್ವತ್ತುಗಳಿಗೂ ಯಾವುದೇ ಸಂಬಂದ ಇಲ್ಲ ಎಂದು ನುಡಿಯ್ತುತ್ತಾರೆ. ಸದರಿ ಆದೇಶಗಳು ಪುರಸಬೆಯ ಎಲ್ಲಾ ಆಸ್ತಿಗಳು ಅನ್ವಯಿಸುತ್ತದೆ ಎಂದರೆ ಸರಿಯಲ್ಲ. 2 ನೇ ಎದುರುದಾರರಿಗೆ ದಾವಾ ಸ್ವತ್ತನ್ನು ನನಗೆ ವಹಿಸಿಕೊಡಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸ್ವಾಧೀನ ಪಡೆದುಕೊಳ್ಳಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮಹಾಲಕ್ಷ್ಮಿ ಮೆಡಿಕಲ್ ನಡೆಸುತ್ತಿರುವ ಶಶಿಕಿರಣ್ ಮತ್ತು ರಾಜೇಗೌಡ ರವರಿಗೆ ತೊಂದರೆ ಕೊಡುವ ಸಲುವಾಗಿ ಜಾರಿ ಕೇಸನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

*ಮರು ವಿಚಾರಣೆ ಇಲ್ಲ.*

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.ಸ.ಮಾ,

*(ಎಸ್.ಚಿನ್ನಸ್ವಾಮಿ)*
ಅಧಿಕ ಸಿವಿಲ್ ಜಡ್ಜ್ ಮತ್ತು *ಜೆ.ಎಂ.ಎಫ್.ಸಿ.,*
*ಚನ್ನರಾಯಪಟ್ಟಣ*